ಕವಿತೆ



ಸುಮಿತ್ ಮೇತ್ರಿ
ಕಲೆ: ಎಸ್.ವಿ. ಹೂಗಾರ್



# ಮಾಯಾಝುಳ

ಬಿಸಿಲು ಬೆಳುದಿಂಗಳ
ಈ ನಟ್ಟನಡು ಮಧ್ಯಾಹ್ನದಲಿ
ಪೂರ್ತಿ ತೊಯ್ದುತೊಪ್ಪೆಯಾಗಿರುವೆ

ಎಲ್ಲಾ ಮಡಿಕೆಗಳು ಈಗ ನುಚ್ಚುನೂರು
ಅಪಾರದರ್ಶಕ ಪಾಚಿಗಟ್ಟಿದ
ಹೃದಯದ ಮೇಲೆ
ವೈರಾಗ್ಯದ ಮಯೂರ ನೃತ್ಯ
ಸಳಸಳನೆ ಸರಿದ ಸರ್ಪ ನೆಟ್ಟಚಿತ್ತ ಕದಲಿಸಿದೆ

ಹೌದು,
ಇದೇ ನನ್ನ ಧ್ಯಾನ:
ಇಂತಹ ಘಳಿಗೆಯಲ್ಲಿ
ನಾನಿರಬೇಕೆಂದು ಅನಿಸಿದಾಗ ಇಲ್ಲವಾಗಿ
ಮಾತನಾಡಬೇಕೆಂದಾಗ ಮೌನವಾಗಿ
ಮೂಕನಾಗುತ್ತೇನೆ
ನನ್ನ ಸುಗಮ ದಾರಿಗಳಿಗೆ ಗುರಿಯಿಲ್ಲ
ಅಲೆದಾಡುವ ತರಗೆಲೆಗಳಂತೆ
ಅಲೆಮಾರಿ ಹಕ್ಕಿಯೊಂದರ ಮೂಡಿನಲ್ಲಿರುವೇ



ಇಲ್ಲಿ ಅಂತಿಮ ಆಸರೆ
ರೆಕ್ಕೆ ಕತ್ತರಿಸಿದ ಹಕ್ಕಿಯಂತೆ
ರೆಂಬೆಗಳು ಮುರಿದು ಬಿದ್ದ ಮರದಂತೆ
ಚಿಕ್ಕಕೊಳದ ತುಂಬ ಹಂಸಕಲರವ
ತೊಟ್ಟಿಲಲ್ಲಿ ಮಲಗಿದ ಮಗುವಿನ ನಗು
ತುಂಬಿರಬೇಕು ಬಿರುಬಿಸಿಲಿನ ಮಾಯಾಝುಳ
ಅಬ್ಬಾ... ನಾನು ಏನು ಅಂತ ಆಡಲಿ

ದಿನಾಂತ್ಯ ಉದಯಿಸುವ ತಾರೆಗಳು
ಆಕಾಶ ಮತ್ತು ಭೂಮಿ ಒಂದಾಗಿವೆ
ತೂಗಾಡುವ ಇಳಿಸಂಜೆ
ನಾನು ಸದ್ದಿಲ್ಲದೇ
ಹಗುರವಾಗಿ ಹೊದ್ದು ಮಲಗುತ್ತೇನೆ

ಬಾ ಹಂಸವೇ
ಜೋಗುಳ ಹಾಡಿ ತಪ್ಪಡಿಸು